ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಾನ್ ಮೈಕೆಲ್ ಕುನ್ನ

ಶ್ರೀ ಎ. ಅಲಂ ಪಾಷ -ವಿರುದ್ಧ-ಶ್ರೀ ಅನಂತ್ ಕುಮಾರ್ ಹೆಗಡೆ ಮತ್ತು ಇನ್ನೊಬ್ಬರು

ಕ್ರಿಮಿನಲ್ ಅರ್ಜಿಸಂಖ್ಯೆ: 8733/2017, ದಿನಾಂಕ 10 ನೇ ಫೆಬ್ರುವರಿ, 2021.

ಆಜ್ಞೆ

ನ್ಯಾಯಮೂರ್ತಿ ಶ್ರೀ ಜಾನ್ ಮೈಕೆಲ್ ಕುನ್ನ:

ಈ ಅರ್ಜಿಯ ಮೂಲಕ ಅರ್ಜಿದಾರನು, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದೊಂದಿಗೆ ಓದಲಾಗುವ 2 (ಡಿ) ಪ್ರಕರಣದ ಅಡಿಯಲ್ಲಿ ತಾನು ಸಲ್ಲಿಸಿದ ದೂರನ್ನು ವಜಾಗೊಳಿಸಿ, ಬೆಂಗಳೂರಿನ X ನೇ ಅಡಿಷನಲ್ ಚೀಫ್ ಮೆಟ್ರೊಪಾಲಿಟಿನ್ ಮ್ಯಾಜಿಸ್ಟ್ರೇಟರು ಹೊರಡಿಸಿದದಿನಾಂಕ: 04.11.2017 ರ ಆದೇಶವನ್ನು ರದ್ದುಗೊಳಿಸಲು ಕೋರಿದಾ .

2. ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆ ನಡೆಸಲು ಬೆಂಗಳೂರಿನ ಇಂದಿರಾನಗರ ಪೊಲೀಸ್ ಠಾಣೆಯ ಅಧಿಕಾರವ್ಯಾಪ್ತಿಗೆ ದೂರನ್ನು ಉಲ್ಲೇಖಿಸಲು ಕೋರಿ, ಅರ್ಜಿದಾರನು ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದೊಂದಿಗೆ ಓದಲಾಗುವ 2 (ಡಿ) ಪ್ರಕರಣದ ಅಡಿಯಲ್ಲಿ ಬೆಂಗಳೂರಿನ X ನೇ ಅಡಿಷನಲ್ ಚೀಫ್ ಮೆಟ್ರೊಪಾಲಿಟಿನ್ ಮ್ಯಾಜಿಸ್ಟ್ರೇಟರ ಮುಂದೆ ದೂರನ್ನು ಸಲ್ಲಿಸಿದ್ದಾನೆ.ದೂರಿನಲ್ಲಿ ಆತನು ಆರೋಪಿಸಿರುವುದೇನೆಂದರೆ,ದಿನಾಂಕ: 22 ನೇ ಅಕ್ಟೋಬರ್, 2017 ರಂದು, " ಸಂಡೆ ಟೈಮ್ಸ್ " ಇಂಗ್ಲಿಷ್ ಸುದ್ದಿ ಪತ್ರಿಕೆಯು, 1 ನೇ ಮತ್ತು 5 ನೇ ಪುಟಗಳಲ್ಲಿ, ರಾಜ್ಯ ಭಾರತೀಯ ಜನತಾ ಪಕ್ಷದ ಮುಖಂಡರು, ಬೆಂಗಳೂರಿನಲ್ಲಿ 10 ನೇ ನವೆಂಬರ್, 2017 ರಂದು ನಡೆಸಬೇಕೆಂದು ಸಿದ್ಧತೆ ಮಾಡಿಕೊಂಡಿದ್ದ ಟಿಪ್ಪು ಜಯಂತಿ ಆಚರಣೆಯನ್ನು ಬಹಿಷ್ಕರಿಸಬೇಕೆಂದಿರುವ ಸುದ್ದಿ ತುಣಕನ್ನು ಪ್ರಕಟಿಸಿತ್ತು.ಸದರಿ ಸುದ್ದಿ ತುಣುಕು, ಕೇಂದ್ರ ಸಚಿವರು ಮತ್ತು ಕಾರವಾರದ ಲೋಕಸಭಾ ಸದಸ್ಯರಾದ ಶ್ರೀ ಅನಂತ್ ಕುಮಾರ್ ಹೆಗ್ಡೆಯವರು (ಆರೋಪಿಸಂಖ್ಯೆ: 1), ಕಾರ್ಯಕ್ರಮವನ್ನು ತಾನು ಬಹಿಷ್ಕರಿಸುವುದಾಗಿ ಹೇಳಿ, ಅದರ ಅಧಿಕೃತ ಆಹ್ವಾನಿತರ ಪಟ್ಟಿಯಿಂದ ತಮ್ಮ ಹೆಸರನ್ನು ಕೈಬಿಡಲು ಕೇಳಿ, ಸರ್ಕಾರದ ಮುಖ್ಯ ಕಾವ್ಯದರ್ಶಿಗಳಿಗೆ ನೀಡಿದ ಲಿಖಿತದಲ್ಲಿನ ವಿವರಗಳನ್ನು ಒಳಗೊಂಡಿತ್ತು.ಅದನ್ನು ಈ ಕೆಳಗಿನಂತೆ ವರದಿ ಮಾಡಲಾಗಿದೆ:

" ಶುಕ್ರವಾರದಂದು ಹೆಗ್ಡೆಯವರು ಹೀಗೆ ಟ್ವೀಟ್ ಮಾಡಿದ್ದರು:

ತಿಳಿಸುವುದೇನೆಂದರೆ # ನಿರ್ದಯ ಕೊಲೆಗಾರ, ಕ್ರೂರ ಮತಾಂಧ ಮತ್ತು ಸಾಮೂಹಿಕ ಅತ್ಯಾಚಾರಿಯಾಗಿ ಕುಖ್ಯಾತನಾದ ವ್ಯಕ್ತಿಯನ್ನು ವೈಭವೀಕರಿಸುವ ನಿರ್ಲಜ್ಜ ಕಾರ್ಯಕ್ರಮಕ್ಕೆ ಕರ್ನಾಟಕ ಸರ್ಕಾರವು ನನ್ನನ್ನು ಆಹ್ವಾನಿಸಬೇಕಿಲ್ಲ. "

ಸುದ್ದಿಪತ್ರಿಕೆಯ 5 ನೇ ಪುಟದಲ್ಲಿ, ವರದಿ ಮಾಡಿದ್ದೇನೆಂದರೆ:

" ಹೆಗ್ಡೆಯವರು, " ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರನ್ನು ಸರ್ಕಾರವು ಮುದ್ರಿಸಿದರೆ, ನಾನು ಕಾರ್ಯಕ್ರಮದಲ್ಲಿ ಉಪಸ್ಥಿತನಿದ್ದು, ಟಿಪ್ಪುವಿನ ವಿರುದ್ಧ ವೇದಿಕೆಯ ಮೇಲಿಂದಲೇ ಘೋಷಣೆಗಳನ್ನು ಕೂಗುತ್ತೇನೆ, ಸಿದ್ದರಾಮಯ್ಯನವರಿಗೆ ತಾಕತ್ತಿದ್ದರೆ, ನನ್ನನ್ನು ತಡೆಯಲಿ ' ಎಂದು ಹೇಳಿದ್ದಾರೆ. "

ಇದಲ್ಲದೆ ಸುದ್ದಿ ಪತ್ರಿಕೆಯ ಅದೇ ಪುಟವು, ಕೆಳಗಿನ ಶಿರೋನಾಮೆಯನ್ನು ಹೊಂದಿದೆ:

" ಟಿಪ್ಪು ಜಯಂತಿ ಆಚರಿಸುವ ಮೂಲಕ ಕಾಂಗ್ರೆಸ್ ಹಿಂದೂಗಳನ್ನು ಅವಮಾನಿಸುತ್ತಿದೆ:ರವಿ "

ಸುದ್ದಿ ತುಣುಕು ಈ ಮುಂದಿನ ಕಾರಣಕ್ಕಾಗಿತ್ತು:

" ಭಾರತೀಯ ಜನತಾಪಕ್ಷದ ವಕ್ತಾರ ಮತ್ತು ವಿಧಾನಸಭಾ ಸದಸ್ಯ ಸಿ.ಟಿ. ರವಿಯವರ ಟ್ವೀಟ್:

" ದುರಹಂಕಾರಿ ಸಿದ್ದರಾಮಯ್ಯನವರ ನೇತೃತ್ವದ ಕೋಮುವಾದಿ ಕಾಂಗ್ರೆಸ್ ಪಕ್ಷವು, ತೀವ್ರ ವಿರೋಧದ ಹೊರತಾಗಿಯೂ, ನಿರಂಕುಶ ಆಡಳಿತಗಾರ ಟಿಪ್ಪುವಿನ ಜಯಂತಿಯನ್ನು ಆಚರಿಸುವ ಮೂಲಕ ನಿರಂತರವಾಗಿ ಹಿಂದುಗಳನ್ನು ಅವಮಾನಿಸುತ್ತಿದೆ. "

ಮೇಲೆ ಹೇಳಿದ ಪ್ರಕಟಣೆಯು ಪ್ರಚೋದನಾಕಾರಿ, ಆಧಾರರಹಿತ, ಸುಳ್ಳು ಸುದ್ದಿ ಮತ್ತು ಧಾರ್ಮಿಕ ಕಾರಣದ ಮೇಲೆ ಹಿಂದು ಹಾಗೂ ಮುಸಲ್ಮಾನ ಈ ಎರಡು ಧರ್ಮಗಳ ನಡುವೆ ದ್ವೇಷವನ್ನು ಉತ್ತೇಜಿಸಲು ಉದ್ದೇಶಿಸಿದ, ಭಾರತ ದಂಡ ಸಂಹಿತೆಯ 153- ಎ, 295- ಎ, 153-ಬಿ ಮತ್ತು 505 ( 2) ಈ ಪ್ರಕರಣಗಳ ಅಡಿಯಲ್ಲಿನ ಅಪರಾಧಗಳನ್ನು ಅನ್ವಯಿಸುವ ಬೇಜವಾಬ್ದಾರಿಯುತ ಆರೋಪಗಳೆಂದು ತಾತ್ಪರ್ಯವಾಗುತ್ತವೆಂದು ದೂರಿನಲ್ಲಿ ಖಡಾಖಂಡಿತವಾಗಿ ಹೇಳಲಾಗಿದೆ ಹಾಗೂ ಇಂಥ ಕೃತ್ಯಗಳು ಕೋಮು ಸಾಮರಸ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಬಾಧಕವಾಗಿರುವುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವ್ಯಾಪ್ತಿಯ ಮೂಲಕ ಸದರಿ ದೂರನ್ನು ತನಿಖೆಗೆ ಉಲ್ಲೇಖಿಸುವಂತೆ ದೂರುದಾರನು ಕೋರಿದ್ದಾನೆ.

3. ದೂರನ್ನು ಸ್ವೀಕರಿಸಿದ ನಂತರ, ಮಾನ್ಯ ಬೆಂಗಳೂರಿನ X ನೇ ಅಡಿಷನಲ್ ಚೀಫ್ ಮೆಟ್ರೊಪಾಲಿಟಿನ್ ಮ್ಯಾಜಿಸ್ಟ್ರೇಟರು, ದಂಡ ಪ್ರಕ್ರಿಯಾ ಸಂಹಿತೆಯ 196 ನೇ ಪ್ರಕರಣದ ( 1) ಮತ್ತು ( 1-ಎ) ಉಪ-ಪ್ರಕರಣಗಳ ಅಡಿಯಲ್ಲಿನ ಉಪಬಂಧಗಳ ಅಭಿಪ್ರಾಯದಲ್ಲಿ, ಸರ್ಕಾರದ ಪೂರ್ವ-ಮಂಜೂರಾತಿ ಇಲ್ಲದೆ, ಭಾರತ ದಂಡ ಸಂಹಿತೆಯ 153- ಎ, 295- ಎ, 153-ಬಿ ಮತ್ತು 505 ( 2) ಈ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ನಿರ್ಬಂಧವಿದೆ ಎಂಬ ಕಾರಣದ ಮೇಲೆ ದೂರನ್ನು ತಳ್ಳಿಹಾಕಿ ಪ್ರಶ್ನಿತ ಆದೇಶವನ್ನು ಹೊರಡಿಸಿದ್ದರು.

4. ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ದಂಡ ಪ್ರಕ್ರಿಯಾ ಸಂಹಿತೆಯ 196 ನೇ ಪ್ರಕರಣದ ಅಡಿಯಲ್ಲಿನ ನಿರ್ಬಂಧವು, ನ್ಯಾಯಾಲಯವು ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಹಂತದಲ್ಲಿ ಮಾತ್ರ ಅನ್ವಯಯವಾಗುತ್ತದೆಯೇ ಹೊರತು, ದಂಡ ಪ್ರಕ್ರಿಯಾ ಸಂಹಿತೆಯ 156 ನೇ ಪ್ರಕರಣದ ಅಡಿಯಲ್ಲಿ ಉಲ್ಲೇಖಿಸುವ ಹಂತದಲ್ಲಿ ಅಲ್ಲವೆಂದು; ಪ್ರಸ್ತುತ ಮೊಕದ್ದಮೆಯಲ್ಲಿ, ವಿಚಾರಣಾ ನ್ಯಾಯಾಲಯವು ಆರೋಪಿತ ಅಪರಾಧಗಳ ಸಂಜ್ಞೇಯತೆಯನ್ನೂ ತೆಗೆದುಕೊಂಡಿಲ್ಲ ಅಥವಾ ಮ್ಯಾಜಿಸ್ಟ್ರೇಟರು ಆರೋಪಿತ ಅಪರಾಧಗಳ ಸಂಜ್ಞೇಯತೆಗೆ ಕೋರಿರುವ ದೂರನ್ನು ಪರಿಗಣಿಸಿಲ್ಲ; ದೂರುದಾರನು,ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಗಾಗಿ ದೂರನ್ನು ಉಲ್ಲೇಖಿಸಲು ವಿನಂತಿಸಿದ್ದನಾದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 196 ನೇ ಪ್ರಕರಣದ ಅಡಿಯಲ್ಲಿರುವ ನಿರ್ಬಂಧವು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ

ಅನ್ವಯವಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ, ಅನಿಲ್ ಕುಮಾರ್ -ವಿರುದ್ಧ-ಎಂ.ಕೆ. ಅಯ್ಯಪ್ಪ (2013) 10 ಎಸ್ಸಿಸಿ 705 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯನ್ನವಲಂಬಿಸಿ, ವಿಚಾರಣಾ ನ್ಯಾಯಾಲಯವು ದೂರನ್ನು ವಜಾಗೊಳಿಸಿದೆ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ರಾಮ್ದೇವ್ ಫುಡ್ ಪ್ರೊಡಕ್ಟ್ ಪ್ರೈವೇಟ್ ಅಮಿಟೆಡ್ -ವಿರುದ್ಧ- ಗುಜರಾತ್ ರಾಜ್ಯ (2015) 6 ಎಸ್ಸಿಸಿ 439 ಮೊಕದ್ದಮೆಯಲ್ಲಿ ಟನ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಂತೆ, ಅನಿಲ್ ಕುಮಾರ್ ಚ-ವಿರುದ್ಧ-ಎಂ.ಕೆ. ಅಯ್ಯಪ್ಪ (ಮೇಅನಂತೆ) ಮೊಕದ್ದಮೆಯಲ್ಲಿ ಸದರಿ ನಿರ್ಣಯದ ವ್ಯಾಪ್ತಿಯನ್ನು ಭಾರತ ದಂಡ ಸಂಹಿತೆಯ 153- ಎ, 153-ಬಿ, 295- ಎ ಮತ್ತು 505 ( 2) ಈ ಪ್ರಕರಣಗಳ ಅಡಿಯಲ್ಲಿನ ಅಪರಾಧಗಳಿಗಾಗಿ ಆರೋಪಿಯಪ್ರಾಸಿಕ್ಯೂಷನ್ಗೆ ಅನ್ವಯಿಸಲಾಗುವುದಿಲ್ಲ.ಲಲಿತಾ ಕುಮಾರ್ -ವಿರುದ್ಧ-ಉತ್ತರ ಪ್ರದೇಶ ರಾಜ್ಯ, (2014) 2 ಎಸ್ಸಿಸಿ 1 ಮೊಕದ್ದಮೆಯಲ್ಲಿ ಉಲ್ಲೇಖಿಸಿದ ಮೊಕದ್ದಮೆಗಳ ಪ್ರವರ್ಗಕ್ಕೆ ಮಾತ್ರವೇ ಅನ್ವಯವಾಗುತ್ತವೆ ಎಂಬ ಅನಿಲ್ ಕುಮಾರ್ –ವಿರುದ್ಧ ಎಂ.ಕೆ. ಅಯ್ಯಪ್ಪ (ಮೇಲಿನಂತೆ) ಮೊಕದ್ದಮೆಯಲ್ಲಿನ ಅಭಿಪ್ರಾಯಗಳೆಂದರೆ:

(ಎ) ವೈವಾಹಿಕ ವಿವಾದಗಳು/ಕೌಟುಂಬಿಕ ವಿವಾದಗಳು

(ಬಿ) ವಾಣಿಜ್ಯ ಅಪರಾಧಗಳು

(ಸಿ) ವೈದ್ಯಕೀಯ ನಿರ್ಲಕ್ಷ್ಯತೆಯ ಪ್ರಕರಣಗಳು

(ಡಿ) ಲಂಚದ ಪ್ರಕರಣಗಳು

(ಇ) ಅತ್ಯಧಿಕ ವಿಳಂಬವಾಗಿರುವ ಪ್ರಕರಣಗಳು/ಕ್ರಿಮಿನಲ್ ಪ್ರಾಸಿಕ್ಯೂಷನ್ ಪ್ರಾರಂಭಿಸುವಲ್ಲಿ ಉಪೇಕ್ಷೆ ಮುಂದುವರಿದು ಮಾನ್ಯ ನ್ಯಾಯವಾದಿಗಳು, ಮೊಕದ್ದಮೆಯ ಗುಣಾರ್ಹತೆಗಳನ್ನು ವಿಚಾರಿಸದೆ ಮಾನ್ಯ ಮ್ಯಾಜಿಸ್ಟ್ರೇಟರು ದೂರನ್ನು ವಜಾಗೊಳಿಸುವ ಪೂರ್ವನಿರ್ಧರಿತ ಮನಸ್ಥಿತಿಯನ್ನು ವ್ಯಕ್ತಪಡಿಸುವ ಮೂಲಕ ದೂರನ್ನು ಸಹ ದಾಖಲಿಸಿಕೊಳ್ಳದೆ ಪ್ರಶ್ನಿತ ಆದೇಶವನ್ನು ಹೊರಡಿಸಿದ್ದರೆಂಬುದನ್ನು ತೋರಿಸಿ, ಪ್ರಶ್ನಿತ ಆದೇಶವು, ಹೊರನೋಟಕ್ಕೆ ಗಮನ ಹರಿಸದಿರುವುದನ್ನು ಬಿಂಬಿಸುತ್ತದೆಯಾದ್ದರಿಂದ, ಪ್ರಶ್ನಿತ ಆದೇಶವನ್ನು ರದ್ದುಗೊಳಿಸಿ, ಕಾನೂನಿಗೆ ಅನುಸಾರವಾಗಿ ದೂರನ್ನು ಪರಿಗಣಿಸಲು ವಿಚಾರಣಾ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ಹಿಂತಿರುಗಿಸುವಂತೆ ಅವರು ಕೋರಿದ್ದಾರೆ.

5. 2 ನೇ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಮೇಲಿನ ನಿವೇದನೆಗಳನ್ನು ಖಂಡಿಸಿ, ದೂರಿನಲ್ಲಿ ಮಾಡಲಾದ ಆರೋಪಗಳು ಮೊದಲ ನೋಟಕ್ಕೆ ಭಾರತ ದಂಡ ಸಂಹಿತೆಯ 153- ಎ, 295- ಎ, 153- ಬಿ ಮತ್ತು 505 ( 2) ನೇ ಪ್ರಕರಣಗಳ ಅಡಿಯಲ್ಲಿ ಅಪರಾಧಗಳ ಅಂಶಗಳನ್ನು ಬಹಿರಂಗಪಡಿಸುವುದಿಲ್ಲ ಮತ್ತು ಸದರಿ ಸಂದರ್ಭಗಳ ಮೇರೆಗೆ, ವಿಚಾರಣಾ ನ್ಯಾಯಾಲಯವು, ಆರೋಪಿತ ಅಪರಾಧಗಳ ತನಿಖೆ ಮಾಡಲು ತನಿಖಾ ಏಜನ್ಸಿಗೆ ನಿರ್ದೇಶನ ನೀಡುವುದಕ್ಕಾಗಿ ವಾದವನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿದೆ ಎಂದು ದೂರನ್ನು ವಜಾಗೊಳಿಸಿರವುದನ್ನು ಸಮರ್ಥಿಸಿಕೊಂಡಿತ್ತು ಎಂಬ ಸಂಗತಿಗೆ ಒತ್ತು ನೀಡಿದ್ದಾರೆ.ಮುಂದುವರಿದು ಮಾನ್ಯ ನ್ಯಾಯವಾದಿಗಳು, ದಿನಾಂಕ:29.05.2019 ರ ಶ್ರೀ ಎ ಆಲಂ ಪಾಷಾ ವಿರುದ್ಧ ಶ್ರೀ ರವಿಶಂಕರ್ ಕ್ರಿಮಿನಲ್ ಅರ್ಜಿಸಂಖ್ಯೆ: 3632/2018 ಈ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿ, ಎಲ್. ನಾರಾಯಣ ಸ್ವಾಮಿ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು; (2016) 9 ಎಸ್ಸಿಸಿ 598 ಶಂಕರನ್ ಮೊಯಿತ್ರ –ವಿರುದ್ಧ ಸಾಧನಾ

ದಾಸ್ ಮತ್ತು ಇನ್ನೊಬ್ಬರು; (2006) 4 ಎಸ್ಸಿಸಿ 584 ಮನ್ಮರಿಭಾಯಿ ಮಲ್ಲಭಾಯಿ ಕಕಾಡಿಯ-ವಿರುದ್ಧ-ಶ್ಯೆಲೇಶ್ಬಾಯಿ ಮೋಹನ್ಬಾಯಿ ಪಟೇಲ್ ; (2012) 10 ಎಸ್ಸಿಸಿ 517 ಉತ್ತರಪ್ರದೇಶ ರಾಜ್ಯ ವಿರುದ್ಧ-ಪಾರಸ್ ನಾಥ್ ಸಿಂಗ್ (2009) 6 ಎಸ್ಸಿಸಿ 372, ಮತ್ತು ಪಶ್ಚಿಮ ಬಂಗಾಳ ರಾಜ್ಯ ವಿರುದ್ಧ ಮೊಹಮ್ಮದ್ ಖಾಅದ್ (1995) 1 ಎಸ್ಸಿಸಿ 684 ಈ ಮೊಕದ್ದಮೆಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಚ ಕಾನೂನಿನ ಉದ್ಘೋಷಣೆಯ ದೃಷ್ಟಿಯಲ್ಲಿ, ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಯನ್ನು ನಿರ್ದೇಶಿಸುವ ಆದೇಶವನ್ನು ಸಿಂಧುವಾದ ಮಂಜೂರಾತಿ ಇಲ್ಲದೆ ಹೊರಡಿಸಲಾಗುವುದಿಲ್ಲವಾದ್ದರಿಂದ, ಪ್ರಶ್ನಿತ ಆದೇಶವು ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಈ ನ್ಯಾಯಾಲಯದ ಹಸ್ತಕ್ಷೇಪವನ್ನು ಸಮರ್ಥಿಸುವಂಥ ಯಾವುದೇ ತಪ್ಪು ಅಥವಾ ಕಾನೂನುಬಾಹಿರತೆಗೆ ಗುರಿಯಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.

ನ್ಯಾಯಾಲಯದಲ್ಲಿ ಮಂಡಿಸಿದ ನಿವೇದನೆಗಳನ್ನು ನಾನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಜಾಗರೂಕತೆಯಿಂದ ಪರಿಗಣಿಸಿದ್ದೇನೆ.

ಪರಿಗಣನೆಗೆ ಉದ್ಭವಿಸುವ ಪ್ರಶ್ನೆಯೆಂದರೆ:

" ದ ಂ ಡ ಪ್ರಕ್ರಿಯಾ ಸ ಂ ಹಿತೆಯ 196 ( 1) ನೇ ಮತ್ತು 196 ( 1-ಎ) ಪ್ರಕರಣಗಳು, ಸಕ್ಷಮ ಸರ್ಕಾರದ ಪೂರ್ವ-ಮಂಜೂರಾತಿಯಿಲ್ಲದೆ, ದೂರಿನಲ್ಲಿ ನಮೂದಿಸಿದ ಅಪರಾಧಗಳ ಸಂಬಂಧದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಗಾಗಿ ಅದನ್ನು ಉಲ್ಲೇಖಿಸುವುದರಿಂದ ನ್ಯಾಯಾಲಯವನ್ನು ತಡೆಯುತ್ತವೆಯೇ?

6. ದಾಖಲೆಗಳನ್ನು ಪರಿಶೀಲಿಸಿದ ನಂತರ,ದಿನಾಂಕ: 31.10.2017 ರಂದು ನ್ಯಾಯಾಲಯದ ಮುಂದೆ ಈ ಮುಂದಿನ ಮನವಿಯೊಂದಿಗೆ ದೂರನ್ನು ಸಲ್ಲಿಸಲಾಯಿತು ಎ ಂ ಬುದು ಕ ಂ ಡುಬ ಂ ದಿದೆ:

ಈ ಕಾರಣಕ್ಕಾಗಿ, ಮೇಲೆ ಹೆಸರಿಸಿದ ದೂರುದಾರನು ಅತ್ಯಂತ ಗೌರವದಿಂದ:

(ಎ) ಈ ನ್ಯಾಯಾಲಯದ ಕಡತದಲ್ಲಿ ದೂರುದಾರನು ಸಲ್ಲಿಸಿದ ಪ್ರಸ್ತುತ ದೂರನ್ನು ಸ್ವೀಕರಿಸಲು;

(ಬಿ) ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ, ಬೆಂಗಳೂರಿನ ಇಂದಿರಾನಗರ ಪೊಲೀಸ್ ಠಾಣೆ ಅಧಿಕಾರವ್ಯಾಪ್ತಿಗೆ ಅದನ್ನು ಉಲ್ಲೇಖಿಸಲು;

(ಸಿ) ನ್ಯಾಯ ಮತ್ತು ನಿಷ್ಪಕ್ಷಪಾತದ ಹಿತಾಸಕ್ತಿಯಲ್ಲಿ, ಈ ಮಾನ್ಯ ನ್ಯಾಯಾಲಯವು ಯುಕ್ತವೆಂದು ಭಾವಿಸಬಹುದಾದಂಥ ಆದೇಶಗಳು, ನಿರ್ದೇಶನ, ಮುಂತಾದವುಗಳನ್ನು ಹೊರಡಿಸಲು

ಈ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿರುತ್ತಾನೆ.

ಮಾನ್ಯ ವಿಚಾರಣಾ ನ್ಯಾಯಾಧೀಶರು ವಾದವನ್ನು ದಾಖಲಿಸದೆ, ದೂರುದಾರನ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿ, ಮೊಕದ್ದಮೆಯ ಗುಣಾರ್ಹತೆಗಳನ್ನು ಸಹ ಪರಿಗಣಿಸದೆ, ದೂರನ್ನು ವಜಾಗೊಳಿಸಿದಿನಾಂಕ: 04.11.2017 ರಂದು ಪ್ರಶ್ನಿತ ಆದೇಶವನ್ನು ಘೋಷಿಸಿದ್ದು, ಅದು ಮೊಕದ್ದಮೆಯ ಗುಣಾರ್ಹತೆಗಳನ್ನು ಯುಕ್ತವಾಗಿ ಗಮನಿಸದೆ, ದೂರನ್ನು ವಜಾಗೊಳಿಸುವ ಮನೋಭಾವದೊಂದಿಗೆ ಪ್ರಶ್ನಿತ ಆದೇಶವನ್ನು ಹೊರಡಿಸಿದ್ದಾರೆಂಬುದನ್ನು ಸೂಚಿಸುತ್ತದೆ.

7. ದಂಡ ಪ್ರಕ್ರಿಯಾ ಸಂಹಿತೆಯ 196 ( 1) ಮತ್ತು ( 1-ಎ) ಪ್ರಕರಣಗಳು, ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದರಿಂದ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಯನ್ನು ನಿರ್ದೇಶಿಸುವುದರಿಂದ ನ್ಯಾಯಾಲಯವನ್ನು ನಿರ್ಬಂಧಿಸುತ್ತವೆ ಎಂಬ ಸಂಗತಿಯನ್ನು ಗಮನಿಸದೆ, ದಂಡ ಪ್ರಕ್ರಿಯಾ ಸಂಹಿತೆಯ 1961) ಮತ್ತು ( 1-ಎ) ಪ್ರಕರಣದಲ್ಲಿನ ನಿರ್ದೇಶನದ ದೃಷ್ಟಿಯಿಂದ, ಭಾರತ ದಂಡ ಸಂಹಿತೆಯ 153- ಎ, 295- ಎ, 153-ಬಿ ಮತ್ತು 505 ( 2) ನೇ ಪ್ರಕರಣಗಳ ಅಡಿಯಲ್ಲಿನ ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದಕ್ಕೆ ಸಂದರ್ಭಾನುಸಾರ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಪೂರ್ವ-ಮಂಜೂರಾತಿ ಅವಶ್ಯಕ ಎಂಬ ಏಕೈಕ ಕಾರಣದ ಮೇಲೆ ವಿಚಾರಣಾ ನ್ಯಾಯಾಲಯವು ದೂರನ್ನು ವಜಾಗೊಳಿಸಿದೆ.196 ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

196. ರಾಜ್ಯದ ವಿರುದ್ಧದ ಅಪರಾಧಗಳಿಗಾಗಿ ಮತ್ತು ಅಂಥ ಅಪರಾಧವನ್ನು ಮಾಡುವ ಅಪರಾಧಿಕ ಒಳಸಂಚಿಗಾಗಿ ಪ್ರಾಸಿಕ್ಯೂಷನ್ –

(1) ಯಾವ ನ್ಯಾಯಾಲಯವೂ,

( ಎ) ಭಾರತ ದಂಡ ಸಂಹಿತೆಯ (1860 ರ 45) ಅಧ್ಯಾಯ-VI ಅಥವಾ 153 ಎ ಪ್ರಕರಣ, 295 ಎ ಪಕರಣ ಅಥವಾ 50 ನೇ ಪ್ರಕರಣದ 362

(1) ನೇ ಉಪ-ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಥವಾ

(ಬಿ) ಅಂಥ ಅಪರಾಧವನ್ನು ಮಾಡುವ ಅಪರಾಧಿಕ ಒಳಸಂಚನ್ನು; ಅಥವಾ

(ಸಿ) ಭಾರತ ದಂಡ ಸಂಹಿತೆಯ (1860 ರ 45) 108 ಎ ಪ್ರಕರಣದಲ್ಲಿ ವಿವರಿಸಲಾದ ಯಾವುದೇ ಅಂಥ ದುಷ್ಪ್ರೇರಣೆಯನ್ನು,

ಕೇ ಂ ದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಪೂರ್ವ- ಮ ಂ ಜೂರಾತಿಯಿದ್ದ ಹೊರತು, ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

( 1 ಎ) ಯಾವುದೇ ನ್ಯಾಯಾಲಯವು,

( ಎ) ಭಾರತ ದಂಡ ಸಂಹಿತೆಯ (1860 ರ 45) 153 ಬಿ ಪ್ರಕರಣದ ಅಥವಾ 505 ನೇ ಪ್ರಕರಣದ ( 2) ನೇ ಉಪ-ಪ್ರಕರಣದ ಅಥವಾ ( 3) ನೇ ಉಪ-ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧ; ಅಥವಾ

(ಬಿ) ಅಂಥ ಅಪರಾಧವನ್ನು ಮಾಡುವುದಕ್ಕೆ ಅಪರಾಧಿಕ ಒಳ ಸಂಚನ್ನು,

ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರ ಪೂರ್ವ-ಮಂಜೂರಾತಿಯನ್ನು ಪಡೆದ ಹೊರತು ಸಂಜ್ಞೇಯತೆಯನ್ನು ಕೈಗೊಳ್ಳತಕ್ಕದ್ದಲ್ಲ.

196 ನೇ ಪ್ರಕರಣದ ( 1) ಮತ್ತು ( 1-ಎ) ಉಪ-ಪ್ರಕರಣಗಳ ಅಡಿಯಲ್ಲಿನ ನಿಷೇಧವು, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆ ನಡೆಸುವುದಕ್ಕಾಗಿ ದೂರನ್ನು ಉಲ್ಲೇಖಿಸುವ ಹಂತದಲ್ಲಿ ಕಾರನಿರ್ವಹಿಸುತ್ತದೆ ಎಂದು ಸದರಿ ಪ್ರಕರಣದಲ್ಲಿ ಹೇಳಿರುವುದಿಲ್ಲ.ವಿಚಾರಣಾ ನ್ಯಾಯಾಲಯವು, ರಾಮ್ದೇವ್

ಫುಡ್ ಪ್ರೊಡಕ್ಟ್ ಪ್ರೈವೇಟ್ ಅಮಿಟೆಡ್ ವಿರುದ್ಧ ಗುಜರಾತ್ ರಾಜ್ಯ, ಟನ (ಮೇಅನಂತೆ) ಮತ್ತು ಅನಿಲ್ ಕುಮಾರ್ ವಿರುದ್ಧ-ಎಂ.ಕೆ.ಅಯ್ಯಪ್ಪ (ಮೇಲಿನಂತೆ) ಈ ಮೊಕದ್ದಮೆಗಳಲ್ಲಿನ ನಿರ್ಣಯಗಳನ್ನು ದಾರಿತಪ್ಪಿಸುವ ಮೂಲಕ ತದ್ವಿರುದ್ಧವಾದ ಅಭಿಪ್ರಾಯವನ್ನು ತಾಳಿರುವುದು ಕಂಡುಬರುತ್ತದೆ.ಅವಿವಾದಿತವಾಗಿ, ಈ ನಿರ್ಣಯಗಳನ್ನು, ಭ್ರಷ್ಟಾಚಾರ ತಡೆ ಅಧಿನಿಯಮದ 19 ನೇ ಪ್ರಕರಣದ ಸಂದರ್ಭದಲ್ಲಿ ನೀಡಲಾಗಿತ್ತು.ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಗಾಗಿ ದೂರನ್ನು ಸಲ್ಲಿಸುವ ಹಂತದಲ್ಲೂ ಸಹ, ಪ್ರತಿಯೊಂದು ಸಂದರ್ಭದಲ್ಲೂ, ಸಂಜೇಯತೆಗೆ ತೆಗೆದುಕೊಳ್ಳುವ ಮೊದಲಿನ ಹಂತದಲ್ಲಿ ಸರ್ಕಾರದ ಪೂರ್ವ-ಮಂಜೂರಾತಿಯು ಅಗತ್ಯವಾಗಿದೆ ಎಂಬ ಮಟ್ಟಿಗೆ ಸದರಿ ನಿರ್ಣಯಗಳಲ್ಲಿ ಯಾವುದೇ ವ್ಯಾಪ್ತಿಯನ್ನು ನಿಗದಿಪಡಿಸಿಲ್ಲ.ಇನ್ನೊಂದೆಡೆ ಅದರಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ಮ್ಯಾಜಿಸ್ಟ್ರೇಟರು ನಿರ್ದೇಶನವನ್ನು ನೀಡುವಾಗ, ಮೊಕದ್ದಮೆಯ ವಾಸ್ತವಾಂಶಗಳ ಕಡೆಗೆ ಅವರ ಗಮನ ಹರಿಸುವುದು ಅಗತ್ಯವಾಗಿದೆ ಎಂದು ವಿವರಿಸಲಾಗಿದೆ.ಮೇಲಿನ ನಿರ್ಣಯದಲ್ಲಿ ವಿಧಿಸಿರುವುದೇನೆಂದರೆ, ಮ್ಯಾಜಿಸ್ಟ್ರೇಟರು ತಮ್ಮ ಗಮನವನ್ನು ಹರಿಸಿದಾಗ ಮಾತ್ರವೇ, ಅವರು ಆರೋಪಿತ ಅಪರಾಧಗಳ ಸಂಕ್ಞೇಯತೆಯನ್ನು ತೆಗೆದುಕೊಂಡಿರುವರೆಂದು ಹೇಳಬಹುದು ಎಂಬುದಾಗಿದೆ.ಮಾನ್ಯ ಮ್ಯಾಜಿಸ್ಟ್ರೇಟರು ತಮ್ಮ ಗಮನವನ್ನು ಹರಿಸದೇ ಇದ್ದಾಗ, ಅವರು ಆರೋಪಿತ ಅಪರಾಧಗಳ ಸಂಜ್ಞೆಯತೆಯನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಲಾಗುವುದಿಲ್ಲ.

8. ಪ್ರಶ್ನಿತ ಆದೇಶವನ್ನು ಓದಲಾಗಿ, ಮಾನ್ಯ ಮ್ಯಾಜಿಸ್ಟ್ರೇಟರು ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳ ಕಡೆಗೆ ತಮ್ಮ ಗಮನವನ್ನು ಹರಿಸಿಲ್ಲ ಮತ್ತು ದೂರಿನಲ್ಲಿ ಉಲ್ಲೇಖಿಸಿದ ಕಾನೂನಿನ ಉಪಬಂಧಗಳನ್ನು ಮಾತ್ರವೇ ಉಲ್ಲೇಖಿಸಿ, ದಂಡ ಪ್ರಕ್ರಿಯಾ ಸಂಹಿತೆಯ 196 ( 1) ಮತ್ತು ( 1 ಎ) ಪ್ರಕರಣದ ಅಡಿಯಲ್ಲಿರುವ ನಿಷೇಧದ ದೃಷ್ಟಿಯಿಂದ, ದೂರನ್ನು ತನಿಖೆಗೆ ಉಲ್ಲೇಖಿಸಲು, ಸರ್ಕಾರದ ಪೂರ್ವ-ಮಂಜೂರಾತಿಯು ಅವಶ್ಯಕವೆಂದು ಅಭಿಪ್ರಾಯಪಟ್ಟು ಕ್ರಮ ಜರುಗಿಸಿದ್ದಾರೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.ಈ ಮುಂದಿನ ಕಾರಣಗಳಿಗಾಗಿ ಈ ನಿಲುವನ್ನು ಒಪ್ಪಲಾಗುವುದಿಲ್ಲ:

9. ಅನಿಲ್ ಕುಮಾರ್ ಮತ್ತು ಇತರರು -ವಿರುದ್ಧ-ಎಂ.ಕೆ.ಅಯ್ಯಪ್ಪ ಮತ್ತು ಇನ್ನೊಬ್ಬರು (ಪೂರ್ವೋಕ್ತ) ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಭ್ರಷ್ಟಾಚಾರ ತಡೆ ಅಧಿನಿಯಮದ 19 ನೇ ಪ್ರಕರಣದ ಆಧಾರದ ಮೇಲೆ ಸದರಿ ಅಧಿನಿಯಮದ 2 (ಸಿ) ಪ್ರಕರಣದ ಅಡಿಯಲ್ಲಿ ಪರಿಭಾಷಿಸಿದಂತೆ ಸರ್ಕಾರಿ ನೌಕರನಿಗೆ ಸಂಬಂಧಿಸಿದ ಆರೋಪಗಳನ್ನು ಹೊರಿಸಿದಾಗ, ಸಂಜ್ಞೆಯತೆಗೆ ತೆಗೆದುಕೊಳ್ಳುವ ಮೊದಲಿನ ಹಂತದಲ್ಲೂ ಸಹ ಮಂಜೂರಾತಿಯು ಪೂರ್ವ-ಷರತ್ತಾಗಿದೆ ಎಂಬ ಪರಿಣಾಮಕ್ಕೆ ನಿಯಮವನ್ನು ವಿಧಿಸಿದೆ.ಸದರಿ ತೀರ್ಪಿನ 15 ನೇ ಮತ್ತು 21 ನೇ ಕಂಡಿಕೆಗಳಿಂದ ಇದು ಸ್ಪಷ್ಟವಾಗುತ್ತದೆ.ಸದರಿ ಕಂಡಿಕೆಗಳಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

"15. " ಸಂಜ್ಞೆಯತೆ " ಎಂಬ ಪದವು ವ್ಯಾಪಕ ಅಧಿಕಾರ್ಥವನ್ನು ಹೊಂದಿದ್ದು, ಅಪರಾಧದ ಸಂಜ್ಞೆಯತೆಯನ್ನು ತೆಗೆದುಕೊಳ್ಳುವುದಕ್ಕೆ ಮಾತ್ರವೇ ಸೀಮಿತವಾಗಿರುವುದಿಲ್ಲ.ಒಬ್ಬ ವಿಶೇಷ ನ್ಯಾಯಾಧೀಶನು, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ದೂರನ್ನು ತನಿಖೆಗಾಗಿ ಉಲ್ಲೇಖಿಸಿದಾಗ, ಸಹಜವಾಗಿಯೇ, ಅಪರಾಧದ ಸಂಜೇಯತೆಯನ್ನು ಆತನು ತೆಗೆದುಕೊಂಡಿರುವುದಿಲ್ಲವಾದ್ದರಿಂದ, ಅದು ಸಂಜೇಯತೆಗೆ ಮೊದಲಿನ ಹಂತವಾಗುತ್ತದೆ ಮತ್ತು ಸಂಜ್ಞೆಯತೆ ನಂತರದ ಹಂತಕ್ಕೆ ಅದನ್ನು

ಸಮೀಕರಿಸಲಾಗುವುದಿಲ್ಲ.ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ದೂರಿನ ಆಧಾರದ ಮೇಲೆ ವಿಶೇಷ ನ್ಯಾಯಾಧೀಶನು ಅಪರಾಧದ ಸಂಜೇಯತೆಯನ್ನು ತೆಗೆದುಕೊಂಡಾಗ ಮತ್ತು ಮುಂದಿನ ಹಂತವು ದಂಡ ಪ್ರಕ್ರಿಯಾ ಸಂಹಿತೆಯ 202 ನೇ ಪ್ರಕರಣದ ಅಡಿಯಲ್ಲಿ ಅನುಸರಣಾ ಕ್ರಮ ಕೈಗೊಳ್ಳುವುದಾಗಿದ್ದಾಗ, ತತ್ಪರಿಣಾಮವಾಗಿ, ವಿಶೇಷ ನ್ಯಾಯಾಧೀಶನು ಸಂಜೇಯತೆಗೆ ಮೊದಲಿನ ಹಂತದಲ್ಲಿ 156 ( 3) ನೇ ಪ್ರಕರಣದ ಅಡಿಯಲ್ಲಿ ಪ್ರಕರಣವನ್ನು ತನಿಖೆಗಾಗಿ ಉಲ್ಲೇಖಿಸಿರುತಾ ನೆ. "

21. ಇಲ್ಲಿ ಈ ಮೇಲೆ ಉಲ್ಲೇಖಿಸಿದ ವಿವಿಧ ತೀರ್ಪುಗಳಲ್ಲಿ ಈಗಾಗಲೇ ಸೂಚಿಸಿರುವ ಂ ತೆ, ಪೂರ್ವ- ಮ ಂ ಜೂರಾತಿ ಇರಲಿಲ್ಲ ಎಂಬುದನ್ನು ಮ್ಯಾಜಿಸ್ಟ್ರೇಟರು ಒಮ್ಮೆ ಗಮನಿಸಿದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿನ ಅಧಿಕಾರಗಳನ್ನು ಅನ್ವಯಿಸುವಾಗ ಸರ್ಕಾರಿ ನೌಕರನ ವಿರುದ್ಧ ತನಿಖೆಗಾಗಿ ಆದೇಶಿಸಲಾಗುವುದಿಲ್ಲ.ಈಗಾಗಲೇ ಸೂಚಿಸಿರುವಂತೆ, ಮೇಲಿನ ಕಾನೂನಿನ ನಿಲುವನ್ನು, ಉತ್ತರ ಪ್ರದೇಶ -ವಿರುದ್ಧ-ಪಾರಸ್ ನಾಥ್ ಸಿಂಗ್ (2009) 6 ಎಸ್ಸಿಸಿ 372 ಮತ್ತು ಸುಬ್ರಮಣಿಯನ್ ಸ್ವಾಮಿ -ವಿರುದ್ಧ-ಮನ್ಮೋಹನ್ ಸಿಂಗ್ (2012) 3 ಎಸ್ಸಿಸಿ 64 ಮೊಕದ್ದಮೆಗಳಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. "(ಗೆರೆ ಹಾಕಿದ್ದಕ್ಕೆ ಒತ್ತು ನೀಡಲಾಗಿದೆ)

10. ಪ್ರಸ್ತುತ ಮೊಕದ್ದಮೆಯಲ್ಲಿ, ಯಾವುದೇ ಆರೋಪಗಳಿಗೆ ಭ್ರಷ್ಟಾಚಾರ ತಡೆ ಅಧಿನಿಯಮದ ಅಡಿಯಲ್ಲಿ ಅಪರಾಧಗಳನ್ನು ಅನ್ವಯಿಸಿರುವುದಿಲ್ಲ.ಆದುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಗಾಗಿ ದೂರನ್ನು ಉಲ್ಲೇಖಿಸುವ ಹಂತದಲ್ಲಿ ಮಂಜೂರಾತಿಯನ್ನು ಪಡೆಯವ ಪ್ರಶ್ನೆಯೇ ಉದ್ಭವಿಸುವುದಿಲ್ಲ.ಈ ಸಂದರ್ಭದಲ್ಲಿ, ಮಂಜು ಸುರಾನಾ ವಿರುದ್ಧ ಸುನೀಲ್ ಆರೋರ ಮತ್ತು ಇನ್ನೊಬ್ಬರು, ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ತೆಗೆದುಕೊಂಡ ಅಭಿಪ್ರಾಯವನ್ನು ಉಲ್ಲೇಖಿಸುವುದು ಉಪಯುಕ್ತವಾಗಬಹುದು.ಅನಿಲ್ ಕುಮಾರ್ ಮತ್ತು ಇತರರು ವಿರುದ್ಧ ಎಂ. ಕೆ. ಅಯ್ಯಪ್ಪ ಮತ್ತು ಇನ್ನೊಬ್ಬರು (ಮೇಅನಂತೆ) ಮೊಕದ್ದಮೆಯಲ್ಲಿ ಉದ್ಯೋಷಿಸಿದ ಕಾನೂನಿನ ಇಂಗಿತವನ್ನು ವಿವರಿಸುವಾಗ, ಮಾನ್ಯ ಸರ್ವೋಚ್ಚ ನ್ಯಾಯಾಲಯವು 33 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"33. XII ನೇ & XIV ನೇ ಮತ್ತು ಅಧ್ಯಾಯಗಳ ಅಡಿಯಲ್ಲಿ ಮ್ಯಾಜಿಸ್ಟ್ರೇಟರ ನಿರ್ದೇಶನದ ವ್ಯಾಪ್ತಿ ಮತ್ತು ಅಧಿಕಾರಕ್ಕೆ ಸಂಬಂಧಿಸಿದ ವಿಷಯ ಕುರಿತ ತೀರ್ಪುಗಳ ಸರಣಿಯಲ್ಲಿ ಇದನ್ನು ಸುಸ್ಥಾಪಿಸಲಾಗಿದೆ.ಹಾಗಾಗಿ, ಇಲ್ಲಿನ ಪ್ರಶ್ನೆಯೆಂದರೆ, ಭ್ರಷ್ಟಾಚಾರ ತಡೆ ಅಧಿನಿಯಮದ ಮೊಕದ್ದಮೆಗಳಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ಚಲಾಯಿಸಬೇಕಾದ ಅಧಿ ಕಾರವೆ ಂ ಬಷ್ಟರಮಟ್ಟಿಗೆ ಬೇರೆ ಅಭಿ ಪ್ರಾಯವನ್ನು ಓದಬೇಕೆಂಬುದೇ, ಎಂದರೆ ಭ್ರಷ್ಟಾಚಾರ ತಡೆ ಅಧಿನಿಯಮದ 19 ( 1) ನೇ ಪ್ರಕರಣದ ಕಾರಣದಿಂದ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಯ ವ್ಯಾಪ್ತಿಯನ್ನು, ಸರ್ಕಾರಿ ನೌಕರ ಸಂದರ್ಭದಲ್ಲಿ ಪೂರ್ವ-ಮಂಜೂರಾತಿಯನ್ನು ಅಗತ್ಯಪಡಿಸಿ ಆ ಮೂಲಕ ' ಸಂಜ್ಞೆಯತೆ'ಯನ್ನು ತೆಗೆದುಕೊಳ್ಳುವುದು ಒಂದು ಕ್ರಮವೆಂದು ಹೇಳಬಹುದೇ?ಭ್ರಷ್ಟಾಚಾರ ತಡೆ ಅಧಿನಿಯಮದ ಅಡಿಯಲ್ಲಿನ ಅಪರಾಧಗಳಿಗಾಗಿ ಸರ್ಕಾರಿ ನೌಕರನನ್ನು ಪ್ರಾಸಿಕ್ಯೂಷನ್ಗೆ ಒಳಪಡಿಸಲು ಪೂರ್ವ-ಮಂಜೂರಾತಿಯು ದಂಡ ಪ್ರಕ್ರಿಯಾ ಸಂಹಿತೆಯಯ XIV ನೇ ಅಧ್ಯಾಯದ ಅಡಿಯಲ್ಲಿ ಅ ಒಳಗೊ ಂ ಡಿರುವ ಉಪಬ ಂ ಧವೆ ಂ ದು ಹೇಳುವುದು ಅಪಕೃತ್ಯವಾಗುತ್ತದೆ.ಹಾಗಾಗಿ, ಅಂಥ ತಾತ್ಪರ್ಯವನ್ನು, ಅಪರಾಧ

ಕೃತ್ಯದಲ್ಲಿ ತೊಡಗುವ ಸರ್ಕಾರಿ ನೌಕರನು ಉತ್ತರಕ್ಕಾಗಿ ಮಂಜೂರಾತಿ ಕೋರಬೇಕೆಂಬ ಕಾರಣ ಮಾತ್ರದಿಂದಲೇ, 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಗೆ ನಿರ್ದೇಶಿಸುವಾಗ ದಂಡ ಪ್ರಕ್ರಿಯಾ ಸಂಹಿತೆಯ XII ನೇ ಅಧ್ಯಾಯದಲ್ಲಿನ ಅಭಿಪ್ರಾಯವಾಗಬಹುದೇ.

11. ಮೇಲಿನ ಅಭಿಪ್ರಾಯಗಳಿಂದ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಗೆ ನಿರ್ದೇಶಿಸುವಾಗ, ದಂಡ ಪ್ರಕ್ರಿಯಾ ಸಂಹಿತೆಯ XII ನೇ ಮತ್ತು XIV ನೇ ಅಧ್ಯಾಯದಲ್ಲಿ ಭ್ರಷ್ಟಾಚಾರ ತಡೆ ಅಧಿನಿಯಮದ 19 ( 1) ನೇ ಪ್ರಕರಣದ ತಾತ್ಪರ್ಯವನ್ನು ತರಲಾಗುವುದಿಲ್ಲ.ಭಾರತ ದಂಡ ಸಂಹಿತೆ ಅಡಿಯಲ್ಲಿನ ಅಪರಾಧಗಳ ಸಂಬಂಧದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ತನಿಖೆಗೆ ನಿರ್ದೇಶನ ನೀಡುವುದರ ಮತ್ತು ಭ್ರಷ್ಟಾಚಾರ ತಡೆ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸರ್ಕಾರಿ ನೌಕರನ ವಿರುದ್ಧದ ಅಪರಾಧಗಳ ತನಿಖೆಗೆ ನಿರ್ದೇಶನ ನೀಡುವುದರ ನಡುವೆ ಸ್ಪಷ್ಟ ವ್ಯತ್ಯಾಸವಿದೆ.ಭ್ರಷ್ಟಾಚಾರ ತಡೆ ಅಧಿನಿಯಮದ ಉಪಬಂಧಗಳ ಪ್ರಕಾರ, ಸರ್ಕಾರಿ ನೌಕರನು ಭ್ರಷ್ಟಾಚಾರ ತಡೆ ಅಧಿನಿಯಮದ 19 ನೇ ಪ್ರಕರಣದ ಅಡಿಯಲ್ಲಿ ಸಂರಕ್ಷಣೆಯೊಂದಿಗೆ ಸನ್ನದ್ಧನಾಗಿರುತ್ತಾನೆ.ಭ್ರಷ್ಟಾಚಾರ ತಡೆ ಅಧಿನಿಯಮದ ಅಡಿಯಲ್ಲಿ ಆರೋಪಿಸಲಾದ ಅಪರಾಧಗಳ ಸಂಬಂಧದಲ್ಲಿ ಪ್ರಾಸಿಕ್ಯೂಷನ್ ಪ್ರಾರಂಭಿಸುವ ಮುಂಚೆ, ಪೂರ್ವ- ಮ ಂ ಜೂರಾತಿಗೆ ಒತ್ತಾಯಿಸುವ ಮೂಲಕ, ಸುಳ್ಳು ಮತ್ತು ಕ್ಷುಲ್ಲಕ ಪ್ರಾಸಿಕ್ಯೂಷನ್ನಿಂದ ಸರ್ಕಾರಿ ನೌಕರನನ್ನು ಕಾಪಾಡಲು ಆತನಿಗೆ ಈ ಸುರಕ್ಷತೆಯನ್ನು ಒದಗಿಸಲಾಗಿದೆ.ಈ ಸಂದರ್ಭದ ಕಾರಣದಿಂದ, ಅನಿಲ್ ಕುಮಾರ್ ಮತ್ತು ಇತರರು -ವಿರುದ್ಧ-ಎಂ.ಕೆ. ಅಯ್ಯಪ್ಪ ಮತ್ತು ಇನ್ನೊಬ್ಬರು (ಪೂರ್ವೋಕ್ತ) ಮೊಕದ್ದಮೆಯಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಗೆ ಮೊಕದ್ದಮೆಯನ್ನು ಉಲ್ಲೇಖಿಸಿ ಮಾನ್ಯ ವಿಶೇಷ ನ್ಯಾಯಾಧೀಶರು ಅಥವಾ ಮಾನ್ಯ ಮ್ಯಾಜಿಸ್ಟ್ರೇಟರು, ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದನ್ನು ಪರಿಗಣಿಸಿದ್ದರಾದ್ದರಿಂದ, ಸಕ್ಷಮ ಪ್ರಾಧಿಕಾರವು ನೀಡಿದ ಮಂಜೂರಾತಿಯನ್ನು ಹಾಜರುಪಡಿಸಿದ ನಂತರ ಮಾತ್ರವೇ ಮ್ಯಾಜಿಸ್ಟ್ರೇಟರು ವಿಷಯದಲ್ಲಿ ಮುಂದುವರಿಯುವುದನ್ನು ಅಗತ್ಯಪಡಿಸಿದ್ದರು ಎಂದು ಅಭಿಪ್ರಾಯಪಡಲಾಯಿತು.ಆದರೆ, ನನ್ನ ಅಭಿಪ್ರಾಯದಲ್ಲಿ ಇಂಥ ಒಂದು ಅರ್ಥವಿವರಣೆಯನ್ನು ಭಾರತ ದಂಡ ಸಂಹಿತೆಯ ಅಪರಾಧಗಳ ಸಂಬಂಧದಲ್ಲಿ ಸೂಚಿಸಲಾಗುವುದಿಲ್ಲ.

12. ಈ ಸಂಬಂಧದಲ್ಲಿ ಕಾನೂನಿನ ನಿಲುವವನ್ನು, ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು –ವಿರುದ್ಧ-ಪಸ್ತೂರ್ ಪಿ. ರಾಜು (2006) 6 ಎಸ್ಸಿಸಿ 72 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟೀಕರಿಸಿದ್ದು, ಅದರಲ್ಲಿ 196 ( 1-ಎ) ಪ್ರಕರಣವನ್ನು ಉದ್ಧರಿಸಿದ ನಂತರ, ಭಾರತ ದಂಡ ಸಂಹಿತೆಯ 153- ಎ ಪ್ರಕರಣ ಮತ್ತು 505 ನೇ ಪ್ರಕರಣದ ( 2) ನೇ ಮತ್ತು ( 3) ನೇ ಉಪ-ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧದ ಸಂಬಂಧದಲ್ಲಿ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಹಂತದಲ್ಲಿ ಮಂಜೂರಾತಿಯ ಅಗತ್ಯತೆಯನ್ನು ಪರಿಗಣಿಸಲಾಗಿದೆ.ಅದರಲ್ಲಿ ಈ ಕೆಳಗಿನಂತೆ ಅಭಿಪ್ರಾಯ ಪಡಲಾಗಿತ್ತು:

8. ಈ ಉಪಬಂಧದ ಸರಳ ಓದುವಿಕೆಯು, ನ್ಯಾಯಾಲಯವು ಭಾರತ ದಂಡ ಸಂಹಿತೆಯ 153- ಎ ಪ್ರಕರಣ ಮತ್ತು 505 ನೇ 0 ಪ್ರಕರಣದ ( 2) ನೇ ಮತ್ತು ( 3) ನೇ ಉಪ-ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧದ ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಜಿಲ್ಲಾ ಮಾಜಿಸ್ಟ್ರೇಟರ ಪೂರ್ವ- ಮ ಂ ಜೂರಾತಿಯ ಹೊರತು, ಅಂಥ ಅಪರಾಧವನ್ನು ಎಸಗಲು ಮಾಡಿದ ಅಪರಾಧಿಕ ಸ ಂ ಚಿನ ಸ ಂ ಬ ಂ ಧದಲ್ಲಿ

ಸಂಜ್ಞೆಯತೆಯನ್ನು ತೆಗೆದುಕೊಳ್ಳಲಾಗುವುದಿಲ್ಲ ಎಂಬುದನ್ನು ತೋರಿಸುತ್ತದೆ.ಮಂಜೂರಾತಿಯ ಪ್ರಾರಂಭಿಕ ಪದಗಳೆಂದರೆ, " ನ್ಯಾಯಾಲಯವು ಸಂಜ್ಞೆಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ ″ ಎಂಬುದಾಗಿದ್ದು, ತತ್ಪರಿಣಾಮವಾಗಿ, ನ್ಯಾಯಾಲಯವು ಸಂಜ್ಞೆಯತೆಯನ್ನು ತೆಗೆದುಕೊಳ್ಳುವುದರ ವಿರುದ್ಧ ಉಪಬಂಧವು ನಿರ್ಬಂಧವನ್ನು ವಿಧಿಸುತ್ತದೆ.ದಂಡ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣವು ಪದ್ಯಾಲೋಚಿಸಿದಂತೆ, ಪೊಲೀಸ್ ಏಜನ್ಸಿಯು ಅಪರಾಧಿಕ ಪ್ರಕರಣವನ್ನು ದಾಖಲಿಸುವುದರ ಅಥವಾ ತನಿಖೆ ನಡೆಸುವುದರ ಅಥವಾ ತನಿಖೆ ಪೂರ್ಣಗೊಂಡ ನಂತರ ಪೊಲೀಸರು ವರದಿ ಸಲ್ಲಿಸುವುದರ ವಿರುದ್ಧ ಯಾವುದೇ ನಿರ್ಬಂಧವಿರುವುದಿಲ್ಲ.ಅಪರಾಧಿಕ ಪ್ರಕರಣವನ್ನು ದಾಖಲಿಸಿದರೆ, ಅಪರಾಧದ ತನಿಖೆಯನ್ನು ನಡೆಸಿ, ಪೊಲೀಸರು, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರ ಪೂರ್ವ-ಮಂಜೂರಾತಿ ಇಲ್ಲದೆ ಮ್ಯಾಜಿಸ್ಟ್ರೇಟರ ಮುಂದೆ ಅಂಥ ತನಿಖೆಯ ಫಲಿತಾಂಶವಾಗಿ ಒಂದು ವರದಿಯನ್ನು ಸಲ್ಲಿಸಿರುತ್ತಾರೆ.ಅದು ದಂಡ ಪ್ರಕ್ರಿಯಾ ಸಂಹಿತೆಯ 196 ( 1-ಎ) ಪ್ರಕರಣದ ಉಲ್ಲಂಘನೆಯಾದಂತಾಗುವುದಿಲ್ಲ ಮತ್ತು ಯಾವುದೇ ರೀತಿಯ ಕಾನೂನುಬಾಹಿರತೆಯನ್ನು ಎಸಗಿದಂತಾಗುವುದಿಲ್ಲ. "

13. ಮೇಲಿನ ನಿರೂಪಣೆಯಿಂದ, ಮ್ಯಾಜಿಸ್ಟ್ರೇಟರು ಸಂಜ್ಞೆಯತೆಯನ್ನು ತೆಗೆದುಕೊಳ್ಳುವ ಹಂತದಲ್ಲಿ ತನಿಖೆ ಪೂರ್ಣಗೊಂಡ ನಂತರ ಮಾತ್ರವೇ ಸಕ್ಷಮ ಸರ್ಕಾರದ ಮಂಜೂರಾತಿ ಪಡೆಯುವ ಅಗತ್ಯತೆ ಇದೆಯೇ ಹೊರತು, ಸಂಜ್ಞೆಯತೆಯನ್ನು ತೆಗೆದುಕೊಳ್ಳುವ ಹಂತಕ್ಕೆ ಮೊದಲಲ್ಲ ಎಂಬುದು ಸ್ಪಷ್ಟವಾಗುತ್ತದೆ.

14. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಪಶ್ನಿತ ಆದೇಶವು ರದ್ದುಗೊಳ್ಳುವುದಕ್ಕೆ ಅರ್ಹವಾಗಿದೆ.

ತದನುಸಾರವಾಗಿ, ಕ್ರಿಮಿನಲ್ ಅರ್ಜಿಯನ್ನು ಪುರಸ್ಕರಿಸಲಾಗಿದೆ.X ನೇ ಅಡಿಷನಲ್ ಚೀಫ್ ಮೆಟ್ರೊಪಾಲಿಟಿನ್ ಮ್ಯಾಜಿಸ್ಟ್ರೇಟ್, ಬೆಂಗಳೂರು ಇವರು ಹೊರಡಿಸಿದದಿನಾಂಕ: 04.11.2017 ರ ಪಶ್ನಿತ ಆದೇಶವನ್ನು ರದ್ದುಗೊಳಿಸಲಾಗಿದೆ.ಮಾನ್ಯ ಮ್ಯಾಜಿಸ್ಟ್ರೇಟರು ಮೊಕದ್ದಮೆಯ ಸಂಗತಿಗಳ ಕಡೆಗೆ ಅವರ ಗಮನ ಹರಿಸುವಲ್ಲಿ ವಿಫಲರಾಗಿರುವುದರಿಂದ, ಸಂಹಿತೆಯ 1961) ಮತ್ತು ( 1-ಎ) ಪ್ರಕರಣಗಳ ವ್ಯಾಪ್ತಿಯನ್ನು ತಪ್ಪಾಗಿ ಅರ್ಥೈಸುವ ಮೂಲಕ ಪ್ರಶ್ನಿತ ಆದೇಶವನ್ನು ಹೊರಡಿಸಿರುವುದರಿಂದ, ಕಾನೂನಿಗನುಸಾರವಾಗಿ ದೂರನ್ನು ಹೊಸದಾಗಿ ಪರಿಗಣಿಸಲು ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯಕ್ಕೆ ವಿಷಯವನ್ನು ಹಿಂತಿರುಗಿಸಲಾಗಿದೆ.